ರಸ್ತೆಗಳನ್ನು ದುರಸ್ತಿಗೊಳಿಸುವುದು

292(232) ಶ್ರೀಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತುರುವೇಕೆರೆ ತಾಲ್ಲೂಕಿನಲ್ಲಿ ಅಧಿಕ ಮಳೆಯಿಂದಾಗಿ ರಸ್ತೆಗಳಲ್ಲಿ ಹೊಂಡಗಳಾಗಿದ್ದು, ಈ ರಸ್ತೆಗಳನ್ನು ದುರಸ್ತಿಗೊಳಿಸುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ತುಮಕೂರು ಲೋಕೋಪಯೋಗಿ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ವಿಭಾಗದ ವ್ಯಾಪ್ತಿಯ ತುಮಕೂರು ಜಿಲ್ಲೆಯ ತುರುವೆಕೆರೆ ಲೋ.ಇ. ಉಪ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು 38 ಜಿಲ್ಲಾ ಮುಖ್ಯ ರಸ್ತೆಗಳಿದ್ದು, ಇದರ ಒಟ್ಟು ಉದ್ದ 422.95 ಕಿ.ಮೀ ಇದ್ದು ಮತ್ತು 2 ರಾಜ್ಯ ಹೆದ್ದಾರಿಗಳಿದ್ದು ಇದರ ಒಟ್ಟು ಉದ್ದ 43.80 ಕಿ.ಮೀ ಇರುತ್ತದೆ. ತುರುವೇಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಅಧಿಕ ಮಳೆಯಿಂದಾಗಿ ರಸ್ತೆಯಲ್ಲಿನ ಅನೇಕ ಭಾಗಗಳಲ್ಲಿ ಗುಂಡಿಗಳು ಉಂಟಾಗಿರುತ್ತದೆ.

ಈ ಬಗ್ಗೆ ರಸ್ತೆಗಳನ್ನು ದುರಸ್ತಿಗೊಳಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1) ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಗಳಿಗಾಗಿ 2011–12ನೇ ಸಾಲಿನ 3054–13ನೇ ಹಣಕಾಸು ಯೋಜನೆಯಡಿಯಲ್ಲಿ ಒಟ್ಟು 117.40 ಲಕ್ಷ ಅನುದಾನ ನೀಡಿದ್ದು, ಇದಕ್ಕೆ ಒಟ್ಟು 330.16 ಕಿ.ಮೀ ಉದ್ದಕ್ಕೆ ಗುಂಡಿ ಮುಚ್ಚಲು ಯೋಜಿಸಿದ್ದು, ಇಲ್ಲಿಯವರೆಗೆ 35.00 ಕಿ.ಮೀ ಉದ್ದದಲ್ಲಿ ಗುಂಡಿ ಮುಚ್ಚುವ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಸರಪಳಿಗಳಲ್ಲಿ ಗುಂಡಿ ಮುಚ್ಚುವ ಕೆಲಸಗಳು ಪ್ರಗತಿಯಲ್ಲಿರುತ್ತದೆ.

2) ಈ ಸಾಲಿನಲ್ಲಿ ಒಟ್ಟು 22.80 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳಲ್ಲಿನ ಗುಂಡಿ ಮುಚ್ಚಲು ಉದ್ದೇಶಿಸಿದ್ದು, 3054–ಯೋಜನೆ ಶೀರ್ಷಿಕೆಯಡಿ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಒಟ್ಟು ರೂ.9.80 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಈ ಪೈಕಿ ಇಲ್ಲಿಯವರೆಗೆ 7.00 ಕಿ.ಮೀ ಉದ್ದದ ಗುಂಡಿ ಮುಚ್ಚುವ ಕಾಮಗಾರಿಗಳು ಪೂಣಗೊಂಡಿರುತ್ತವೆ.

ಉಳಿದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಪಟ್ಟಣ ಪಂಚಾಯ್ತಿ ಕಾಂಪ್ಲೆಕ್ಸ್ ಕಾಮಗಾರಿ

293(233) ಶ್ರೀ ಎಂ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತುರುವೇಕೆರೆ ಪಟ್ಟಣ ಪಂಚಾಯ್ತಿಯ ಕಾಂಪ್ಲೆಕ್ಸ್ ಮಂಜೂರಾತಿಯಾಗಿ ಸುಮಾರು ಒಂದೂವರೆ ವರ್ಷಗಳು ಕಳೆದರೂ–ಕಾಮಗಾರಿ ಪ್ರಾರಂಭಿಸದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

(ಅ) ಗುತ್ತಿಗೆದಾರರಿಗೆ ಕಾಮಗಾರಿ ಪ್ರಾರಂಭಿಸಲು ಕಾರ್ಯದೇಶವನ್ನು ನೀಡಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

(ಆ) ದಿನಾಂಕ 09.12.2010ರಂದು ಗುತ್ತಿಗೆದಾರರಿಗೆ ಪಟ್ಟಣ ಪಂಚಾಯತಿ ತುರುವೇಕೆರೆ ಇವರ ವತಿಯಿಂದ ಕಾರ್ಯಾದೇಶವನ್ನು ನೀಡಿದ್ದು, ಗುತ್ತಿಗೆ ಕರಾರಿರನ್ವಯ ಜೂನ್ 2012 ಕ್ಕೆ ಕಾಮಗಾರಿಯು ಮುಕ್ತಾಯಗೊಳ್ಳಬೇಕಾಗಿದ್ದು, ದಿನಾಂಕ 2.09.2011 ಹಾಗೂ ದಿನಾಂಕ 17.10.2011 ರಂದು ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ ಕಾಮಗಾರಿಯ ಪ್ರಗತಿಯನ್ನು ತ್ವರಿತಗೊಳಿಸಲು ಸೂಚಿಸಲಾಗಿದೆ. ಪ್ರಸ್ತುತ ವಾಣಿಜ್ಯ ಸಂಕೀರ್ಣ ನೆಲ ಮಟ್ಟದ ತಾರಸೀವರೆಗೆ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಮತ್ಸ್ಯಾಶ್ರಯ ಯೋಜನೆಯಡಿ ಘಟಕ ವೆಚ್ಚ ಹೆಚ್ಚಿಸುವುದು

294(343) ಶ್ರೀ ಮಂಜುನಾಥ್ ಹೆಚ್.ಪಿ.(ಹುಣಸೂರು) ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–